ಕೂರಿಸಿಕೊಂಡ ಅಜ್ಜಿ, 'ಒಂದೂರಿನಲ್ಲಿ ಒಬ್ಬ ರಾಜ, ಆ ರಾಜನಿಗೊಂದು ಮಗಳು...' ಎಂದು ಕತೆ ಶುರು ಮಾಡಿದರೆ ಅಲ್ಲಿ ಕೂತಿದ್ದ ಎಲ್ಲ ಮಕ್ಕಳ ಮನಸ್ಸಿನೊಳಗೂ ಒಬ್ಬೊಬ್ಬಳು ರಾಜಕುಮಾರಿ ಇರುತ್ತಿದ್ದಳು. ಒಬ್ಬಳಿಗೆ ಉದ್ದ ಜಡೆ, ಇನ್ನೊಬ್ಬಳದು ಚೂಪಾದ ಮೂಗು. ಮತ್ತೊಬ್ಬಳು ಸುಲಿಪಲ್ಲ ಚೆಲುವೆ, ಮಗದೊಬ್ಬಳು ಮಾತಿನ ಮಲ್ಲಿ. ಹಾಗೆ ರಾಜಕುಮಾರ ಸಹ ಸುತ್ತಲಿದ್ದ ಹುಡುಗಿಯ ಕಲ್ಪನೆಗೆ ಅನುಸಾರವಾಗಿ ಸೊಗಸುಗಾರನೋ, ಹಾಡುಗಾರನೋ, ಬಿಲ್ವಿದ್ಯೆ ಶೂರನೋ ಆಗಿರುತ್ತಿದ್ದ. ಕಥೆಗಳ ಜೊತೆಜೊತೆಯಲ್ಲಿಯೇ ಮಕ್ಕಳ ಕಲ್ಪನೆಯೂ ಬೆಳೆಯುತ್ತಿತ್ತು. ಕಥೆ ಅಕ್ಷರ ರೂಪದಲ್ಲಿದ್ದಾಗ ನೋಟವಾಗಿ, ಶಬ್ದಗಳ ರೂಪದಲ್ಲಿದ್ದಾಗ ಕೇಳ್ವಿಯಾಗಿ ನಮ್ಮ ಮನಸ್ಸನ್ನು ಸೇರುತ್ತದೆ. ಅದು ಭೂತ, ವರ್ತಮಾನ ಅಥವಾ ಭವಿಷ್ಯದಲ್ಲಿ ನಡೆಯಬಹುದು, ನಮ್ಮ ಊರಿನಲ್ಲಿ ಅಥವಾ ಮತ್ತೆಲ್ಲೋ ನಡೆಯಬಹುದು. ಅದು ಕಾಲಾತೀತ ಮತ್ತು ಸ್ಥಳಾತೀತ. ಕಥೆಗೆ ನಿಗದಿತ ಚೌಕಟ್ಟಿಲ್ಲ, ಅದರ ರೂಪ ಯಾವುದಾದರೂ ಇರಬಹುದು. ಆ ಮಟ್ಟಿಗೆ ಅದು ಕಾಮರೂಪಿ. ಕಥೆಯಾಗಿ, ಕಾದಂಬರಿಯಾಗಿ, ನಾಟಕವಾಗಿ, ಕಥನ ಕವನವಾಗಿ, ಖಂಡಕಾವ್ಯವಾಗಿ, ಲಾವಣಿಯಾಗಿ, ಜನಪದ ಗೀತೆಗಳಾಗಿ, ನೃತ್ಯವಾಗಿ, ಚಿತ್ರಕಥನವಾಗಿ, ಚಲನಚಿತ್ರವಾಗಿ ಯಾವುದೇ ರೂಪದಲ್ಲಿ ಅದು ತನ್ನನ್ನು ತಾನು ಪ್ರಕಟಿಸಿಕೊಳ್ಳಬಹುದು. ಕಥೆಯ ಸಫಲತೆ ಇರುವುದು, ಅದು ನಡೆಯುವಷ್ಟೂ ಹೊತ್ತೂ ಓದುಗ, ಕೇಳುಗ ಅಥವಾ ನೋಡುಗ 'ಇದು ಸಾಧ್ಯವೆ' ಎಂದು ತರ್ಕಕ್ಕೆ ನಿಲ್ಲದೆ ಇರುವುದರಲ್ಲಿ. ತರ್ಕ ಮಾತನಾಡತೊಡಗಿದಾಗ, ಬೆರಗು ಬಾಯಿ ಮುಚ್ಚಿಕೊಳ್ಳುತ್ತದೆ.

ಕಥೆಗಳು ಪ್ರಪಂಚದ ಹಲವಾರು ಭಾಗಗಳಲ್ಲಿ ಅಲ್ಲಿನ ಜನಾಂಗಗಳನ್ನು ನೆಲಮೂಲ ಸತ್ವದ ಜೊತೆಗೆ ಬೆಸುಗೆ ಹಾಕಿವೆ. ವಲಸೆಗಾಗಿ ಬಂದವರು ನೆಲದ ಮೂಲನಿವಾಸಿಗಳನ್ನು ಹಿಂದಕ್ಕೆ ಒತ್ತರಿಸಿದಂತೆಲ್ಲಾ ಆ ನಿವಾಸಿಗಳು ತಮ್ಮ ಪಾತ್ರೆ, ಪಡಗ, ರಾಸುಗಳ ಜೊತೆ ತಮ್ಮ ಸಂಸ್ಕೃತಿಯನ್ನೂ ಕಥೆಗಳ ರೂಪದಲ್ಲಿ ಗಂಟುಕಟ್ಟಿಕೊಂಡು ಹೊರಟರು. ಬೀಡುಬಿಟ್ಟಲ್ಲಿ ಹಳಬರಿಗೆ ಕಥೆಗಳು ನೆನಪಾದರೆ, ಹೊಸ ಜನಾಂಗಕ್ಕೆ ಅದು ತಮ್ಮ ಬೇರುಗಳ ಪಾಠ. ಹಗಲೆಲ್ಲಾ ದುಡಿದವರು ಇಳಿಸಂಜೆಯಲ್ಲಿ ಚಂದ್ರನ ಬೆಳಕಲ್ಲೋ, ಬೆಂಕಿಯ ಸುತ್ತಲೋ ಕುಳಿತು ಕಥೆ ಕೇಳುವಾಗ ಅವರಿದ್ದಲ್ಲೇ ಅವರ ಇತಿಹಾಸ ಹರಳುಗಟ್ಟುತ್ತಿತ್ತು. ಲ್ಯಾಟಿನ್ ಅಮೆರಿಕ, ಆಫ್ರಿಕಾ, ಅಷ್ಟೇ ಏಕೆ ಭಾರತದಲ್ಲೇ ಹಲವಾರು ಬುಡಕಟ್ಟು ಜನರು ತಮ್ಮ ತಮ್ಮ ಬೇರುಗಳಿಗೆ ನೀರೂಡಿಸಿ ಜೀವ ತುಂಬುವುದು ಈ ಕಥೆಗಳ ಮೂಲಕವೇ. ಜೊತೆಜೊತೆಗೆ ಈ ಕಥೆಗಳು ಬದುಕಿನ ಪಾಠಗಳನ್ನು, ನೀತಿ ಪಾಠಗಳನ್ನು ಮತ್ತು ಮೌಲ್ಯಗಳನ್ನು ಮಕ್ಕಳಿಗೆ ಕಲಿಸುವ ಸಾಧನವೂ ಹೌದು. ಈ ಎಲ್ಲಾ ನೆಲಮೂಲ ಸಂಸ್ಕೃತಿಗಳೂ ಮೌಖಿಕ ಪರಂಪರೆ ಉಳ್ಳವು, ಅದರ ಮೂಲಕವೇ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡವು ಎನ್ನುವುದನ್ನು ಸಹ ನಾವು ಗಮನಿಸಬೇಕಾಗುತ್ತದೆ. ಅದರ ಜೊತೆಜೊತೆಗೆ ಕಥನಕಲೆ ಪ್ರಕೃತಿಯ ವಿವರಿಸಲಾಗದ ಸೋಜಿಗಗಳ ಖಾಲಿಬಿಟ್ಟ ಸ್ಥಳಗಳನ್ನು ತುಂಬುವ ಕಲ್ಪನೆಯೂ ಆಗಿರುತ್ತದೆ.

ಹೀಗೆ ಸೂಜಿಯಲ್ಲಿನ ದಾರದಂತೆ, ನೀರಿನೊಳಗಿನ ಜೀವದಂತೆ ಇದ್ದ ಕಥೆಗಳಿಗೆ ಬಹುದೊಡ್ಡ ಆಘಾತ ಜಾಗತೀಕರಣ ಮತ್ತು ಆಧುನೀಕರಣ. ಇವೆರಡೂ ಇದುವರೆಗಿನ ಅನೇಕ ಮೌಲ್ಯಪದ್ಧತಿ ಹಾಗು ಸಾಮಾಜಿಕ ಕಟ್ಟುಗಳನ್ನು ಮುರಿದವು. ಸಂಸಾರದೊಳಗಿನ ಸಮೀಕರಣಗಳನ್ನು ಬದಲಾಯಿಸಿದವು. ಕಥೆಗಳ ವಾಹಕರಾಗಿದ್ದ ಅಜ್ಜಿ ತಾತ ಇರುತ್ತಿದ್ದ ಕೂಡುಕುಟುಂಬಗಳು ಮುರಿದುಬಿದ್ದವು. ಕಥೆಗಳನ್ನಲ್ಲ, ಕಥೆ ಹೇಳುವ ಅಜ್ಜಿಯರನ್ನು, ಕಥೆ ಕೇಳುವ ಮೊಮ್ಮಕ್ಕಳನ್ನೂ ಹುಡುಕಬೇಕಿದೆ ಎಂದು ಕಾದಂಬರಿಕಾರ ನಾ. ಡಿಸೋಜ ಬರೆದದ್ದು ನೆನಪಾಗುತ್ತಿದೆ. ಒಂದು ಕಡೆ ಇಲ್ಲಿನ ಸಾಂಸಾರಿಕ ಘಟಕಗಳ ಕಟ್ಟು ಮುರಿದ ಜಾಗತೀಕರಣ ಇನ್ನೊಂದೆಡೆ ಸಂವಹನ ಕ್ರಾಂತಿಗೆ ಕದ ತೆರೆಯಿತು. ಆಗ ಒಳಗೆ ಬಂದದ್ದು ಟೆಲಿವಿಷನ್ ಮತ್ತು ಅದರ ಚಾನೆಲ್‌ಗಳು. ಮೊದಲಿಗೆ ಇವು ಜಗತ್ತಿಗೆ ತೆರೆದುಕೊಂಡ ಕಿಟಕಿಗಳು ಎಂದೇ